7. ಪರ್ನ್‌ಹೌಸ್ ನವೀಕರಿಸಲಾಗಿದೆ.

8. ಜಪಾನ್ ಮಾದರಿ ತೋಟದಲ್ಲಿ ನವೀಕರಣ ತಾವರೆಕೊಳದಲ್ಲಿ ಕೃತಕ ಜಲಪಾತ ನವೀಕರಿಸಲಾಗಿದೆ.

9. ಸಸ್ಯ ತೋಟದಲ್ಲಿನ ಕೆಲವು ಭಾಗದಲ್ಲಿ ಸೂಕ್ತ ಅಲಂಕಾರಿಕ ಗಿಡಗಳನ್ನು ವೈಜ್ಞಾನಿಕ ರೀತಿಯಲ್ಲಿ ನೆಡಲಾಗಿದೆ.

10. ಲಾನ್ ಮತ್ತು ಮರಗಿಡಗಳು ಹಾಗೂ ಹೂವಿನ ಗಿಡಗಳಿಗೆ ನೀರಿನ ಸೌಕರ್ಯ ಕಲ್ಪಿಸಲಾಗಿದೆ.

ದೊಡ್ಡ ಆಲದಮರಕ್ಕೆ ಬಸ್ ಸೌಲಭ್ಯ

741 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮೂಹಳ್ಳಿ ಬಳಿ ಇರುವ ದೊಡ್ಡ ಆಲದಮರ ಒಂದು ಪ್ರವಾಸಿ ಸ್ಥಳವೆಂಬುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ರಜಾ ದಿನಗಳಂದು ಇಲ್ಲಿಗೆ ಬೆಂಗಳೂರು ಬಸ್ ನಿಲ್ದಾಣ, ಜಯನಗರ ಹಾಗೂ ಶಿವಾಜಿನಗರಗಳಿಂದ ಪುಷ್ಪಕ್ ಬಸ್ ಓಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಹೌದು.

ಆ) ಪರಿಶೀಲಿಸಲಾಗುವುದು.

ಬೆಂಗಳೂರು ನಗರ ಸಾರಿಗೆ ಬಸ್ ನಿಲ್ದಾಣದಿಂದ ಪ್ರಯಾಣಿಸುವವರ ಬಗ್ಗೆ

742 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಸಾರಿಗೆ ಬಸ್ ನಿಲ್ದಾಣದಿಂದ ಪ್ರತಿದಿನ ಪ್ರಯಾಣಿಸುವ ಹಾಗೂ ಬಂದಿಳಿಯುವ ಪ್ರಯಾಣಿಕರ ಸರಾಸರಿ ಸಂಖ್ಯೆಯೆಷ್ಟು?

ಆ) ಈ ನಿಲ್ದಾಣದಲ್ಲಿ ಪ್ಯಾಸೆಂಜರ್ ಲಾಂಜ್ ಸ್ಥಾಪಿಸಲು ಸರ್ಕಾರದವರು ಉದ್ದೇಶಿಸಿದೆಯೇ?

ಇ) ಹಾಗಿದ್ದಲ್ಲಿ ಪ್ರಯಾಣಿಕರಿಗೆ ಒದಗಿಸಲಿರುವ ಸೌಲಭ್ಯಗಳು ಯಾವುವು?